# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

**ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 04-03-2021 ಪ್ರಶ್ನೆ ಸಂಖ್ಯೆ : 515 (645)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಎಂ. ಎ. ಗೋಪಾಲಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 04-03-2021

ಉತ್ತರಿಸುವ ಸಚಿವರು: ಮಾನ್ಯ ಜಲಸಂಪನ್ಮೂಲ ಸಚಿವರು

ವಿಷಯ : ಎತ್ತಿನಹೊಳೆ ಯೋಜನೆಗೆ ಜಮೀನು ನೀಡಿರುವ ರೈತರಿಗೆ ಪರಿಹಾರ ನೀಡುವ ಬಗ್ಗೆ

(ಅ) ಬಯಲುಸೀಮೆ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸುವ ಎತ್ತಿನಹೊಳೆ ಯೋಜನೆಗಾಗಿ ಹಾಸನ ಜಿಲ್ಲೆಯ ಎಷ್ಟು ಗ್ರಾಮಗಳಲ್ಲಿ ಎಷ್ಟು ಎಕರೆ ಜಮೀನನ್ನು ಭೂಸ್ವಾಧೀನ ಮಾಡಿಕೊಳ್ಳಲಾಗಿದೆ; (ಜಮೀನು ಕಳೆದುಕೊಂಡಿರುವ ಸಂತ್ರಸ್ಥರ ಹೆಸರು ಮತ್ತು ಊರಿನ ವಿವರಗಳೊಂದಿಗೆ ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಎತ್ತಿನಹೊಳೆ ಯೋಜನೆಗಾಗಿ ಹಾಸನ ಜಿಲ್ಲೆಯಲ್ಲಿ ಭೂಮಿ ಕಳೆದುಕೊಂಡ ರೈತರಿಗೆ ಸರ್ಕಾರದಿಂದ ಪರಿಹಾರ ನೀಡಲು ಎಕರೆವಾರು ನಿಗಧಿಪಡಿಸಿರುವ ಬೆಲೆ ಎಷ್ಟು; ಇದಕ್ಕಾಗಿ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು ಮತ್ತು ಇದರಲ್ಲಿ ಪರಿಹಾರ ನೀಡಿರುವ ಮೊತ್ತವೆಷ್ಟು;

(ಇ) ಎತ್ತಿನಹೊಳೆ ಯೋಜನೆಯಡಿ ಇದುವರೆಗೂ ಪರಿಹಾರ ಪಡೆದಿರುವ ಭೂ ಸಂತ್ರಸ್ಥರ ಹೆಸರು, ಪರಿಹಾರದ ಮೊತ್ತ ಮತ್ತು ಊರಿನ ವಿವರಗಳನ್ನು ನೀಡುವುದು

(ಈ) ಎತ್ತಿನಹೊಳೆ ಯೋಜನೆಯಡಿ ಇದುವರೆಗೂ ಪರಿಹಾರ ಪಡೆಯದ ಭೂ ಸಂತ್ರಸ್ಥರ ಹೆಸರು, ಪರಿಹಾರದ ಮೊತ್ತ ಮತ್ತು ಊರಿನ ವಿವರಗಳನ್ನು ನೀಡುವುದು; ಇವರಿಗೆ ಪರಿಹಾರ ನೀಡಲು ವಿಳಂಬವಾಗಿರುವುದಕ್ಕೆ ಕಾರಣಗಳೇನು?